ಮಾನ್ಯ ವಾಟಾಳ್ ನಾಗರಾಜ್‌ರವರು ಮಾಹಿತಿಯನ್ನು ಕೊಟ್ಟಿದ್ದಾರೆ. ತಮ್ಮ ಸರ್ಕಾರಕ್ಕೆ ಅದರ ಬಗ್ಗೆ ಆ ಸರ್ಕಾರಗಳಿಂದ ಮಾಹಿತಿಯನ್ನು ತರಿಸಿಕೊಳ್ಳಲು ಏನು ಕಷ್ಟವಿದೆ? ಮಹಾರಾಷ್ಟ್ರ, ಆಂಧ್ರಪ್ರದೇಶ, ಕೇರಳ, ತಮಿಳುನಾಡು ಸರ್ಕಾರದ ಜೊತೆ ತಾವು ಸಂಪರ್ಕ ಸಾಧಿಸಿದರೆ ತಮಗೆ ಮಾಹಿತಿ ಗೊತ್ತಾಗುತ್ತದೆ. ಆ ರಾಜ್ಯಗಳಲ್ಲಿ ನಮ್ಮ ಕನ್ನಡ ಸಂಘಗಳಿವೆ ಅವರ ಜೊತೆ ಸಂಪರ್ಕ ಮಾಡಿದರೆ ತಮಗೆ ಮಾಹಿತಿ ದೊರೆಯುತ್ತದೆ. ಆ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಸದಸ್ಯರೇ ಇದರ ಬಗ್ಗೆ ಹೇಳಿ ಎಂದು ಹೇಳಿ ತಾವು ಜಾರಿಕೊಂಡುಹೋದರೆ ಹೇಗೆ? ಆದುದರಿಂದ ಆ ರಾಜ್ಯಗಳಲ್ಲಿರುವ ನಮ್ಮ ಕನ್ನಡ ಸಂಘಗಳ ಜೊತೆ ತಾವು ಸಂಪರ್ಕ ಸಾಧಿಸಿ ಮಾಹಿತಿಯನ್ನು ತರಿಸಿಕೊಳ್ಳಲು ಪ್ರಯತ್ನ ಮಾಡಿ. ನಮ್ಮ ಗಮನಕ್ಕೇನಾದರು ಮಾಹಿತಿ ತಿಳಿದು ಬಂದರೆ ತಮಗೆ ತಿಳಿಸುತ್ತೇವೆ.

(ಗೊಂದಲ)

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಮಾನ್ಯ ಸದಸ್ಯರುಗಳೀನು ಹೊರ ರಾಜ್ಯದಲ್ಲಿ ಇರತಕ್ಕಂಥ ಕನ್ನಡ ಶಾಲೆಗಳ ಬಗ್ಗೆ ನನ್ನ ಗಮನಕ್ಕೆ ತಂದಿದ್ದಾರೆ, ಅದರ ಬಗ್ಗೆ ನಾವು ಆ ರಾಜ್ಯಗಳ ಶಿಕ್ಷಣ ಸಚಿವರುಗಳ ಜೊತೆ ಸಂಪರ್ಕ ಬೆಳೆಸಿ ಈ ಬಗ್ಗೆ ಅವರ ಸಹಾಯ, ಸಹಕಾರ ಮತ್ತು ಕನ್ನಡ ಶಾಲೆಗಳ ಅಸ್ತಿತ್ವದ ಬಗ್ಗೆ ಅವರುಗಳ ಗಮನವನ್ನು ಸೆಳೆದು ಅಲ್ಲಿ ಏನಾದರು ನಮ್ಮ ಕನ್ನಡಿಗರಿಗೆ ತೊಂದರೆಯಾಗಿದ್ದರೆ ಅದನ್ನು ಸರಿಪಡಿಸಲು ಖಂಡಿತವಾಗಿ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ. ಇಷ್ಟನ್ನು ಮಾತ್ರ ನಾನು ಹೇಳಬಯಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಸನ್ಮಾನ್ಯ ಅಧ್ಯಕ್ಷರೇ, ಅಲ್ಲಿನ ಕನ್ನಡ ಶಾಲೆಗಳನ್ನು ಬರೇ ಸರಿಪಡಿಸುತ್ತೀರೋ ಅವುಗಳು ಬೆಳೆಯಲು ಏನಾದರೂ ಅನುದಾನವನ್ನು ಕೊಡುತ್ತೀರೋ? ಅದೇನು ಪಾಕಿಸ್ತಾನವಲ್ಲ, ಅಮೇರಿಕವಲ್ಲ ನೀವು ಆ ರಾಜ್ಯಗಳಿಗೆ ಮಾಹಿತಿಯನ್ನು ಕೇಳಿದ ತಕ್ಷಣ ಮಾಹಿತಿ ಬರುತ್ತದೆ. ಆ ರೀತಿ ಅವರಿಂದ ಮಾಹಿತಿಯನ್ನು ಕೇಳಿಕೊಂಡಮೇಲೆ ಅವರಿಗೇನಾದರು ಹಣವನ್ನು ಕೊಡುತ್ತೀರ? ಸಹಾಯ ಮಾಡುತ್ತೀರ? ಅಥವಾ ಬರಿ ಬಾಯಿ ಮಾತಿನಲ್ಲಿ ಹೇಳುತ್ತೀರಾ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ನಮ್ಮ ರಾಜ್ಯವನ್ನು ಬಿಟ್ಟು ಬೇರೆ ರಾಜ್ಯದಲ್ಲಿರುವ ಶಾಲೆಗಳಿಗೆ ಅನುದಾನವನ್ನು ಕೊಡುವುದು ಆ ರಾಜ್ಯದ ಕರ್ತವ್ಯ. ಆದರೂ ಸಹ ಅವರ ಹತ್ತಿರ ಈ ಬಗ್ಗೆ ಮಾತನಾಡೋಣ. ನಮ್ಮ ರಾಜ್ಯದಲ್ಲಿರತಕ್ಕ ಬೇರೆ ಭಾಷೆಯ ಶಾಲೆಗಳಿಗೆ ನಾವು ಹೇಗೆ ಅನುದಾನವನ್ನು ಕೊಡುತ್ತೇವೆಯೋ ಅದೇ ರೀತಿ ಅವರೂ ಸಹ ಪ್ರೋತ್ಸಾಹ ಧನವನ್ನು ಕೊಡಬೇಕು ಎನ್ನುವುದನ್ನು ಅವರ ಗಮನಕ್ಕೆ ತರೋಣ. ಮತ್ತು ಆ ಶಾಲೆಗಳ ಅಭಿವೃದ್ಧಿ ಬಗ್ಗೆ ಅಲ್ಲಿನ ಸರ್ಕಾರವೂ ಸಹ ಅಷ್ಟೇ ಕಳಕಳಿಯನ್ನು ಹೊಂದಿರಬೇಕು ಎನ್ನುವುದನ್ನು ನಾನು ಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಆ ರಾಜ್ಯಗಳ ಶಿಕ್ಷಣ ಸಚಿವರುಗಳ ಜೊತೆ ಮಾತನಾಡಿ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಅವರು ಅನುದಾನವನ್ನು ಕೊಡದಿದ್ದರೆ ಆ ಶಾಲೆಗಳನ್ನು ಮುಚ್ಚಿಬಿಡುತ್ತೀರಾ?

(ಉತ್ತರವಿಲ್ಲ)

ಅರಣ್ಯ ಇಲಾಖೆಯಿಂದ ಮರಗಳನ್ನು ಕಡಿಯುವಿಕೆ ಬಗ್ಗೆ ಆಜ್ಞೆ

110 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಮತ್ತು ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಮರಗಳನ್ನು ಕಡಿಯುವ ಬಗ್ಗೆ ಅರಣ್ಯ ಇಲಾಖೆ ಕಳೆದ ನಾಲ್ಕು ತಿಂಗಳುಗಳಲ್ಲಿ ವಿವಿಧ ಆಜ್ಞೆಗಳನ್ನು ಹೊರಡಿಸಿರುವುದು ನಿಜವೇ?

ಆ) ಹಾಗಿದ್ದರೆ, ಅವುಗಳಿಗೆ ಕಾರಣಗಳೇನು?

ಇ) ಉಚ್ಚ ನ್ಯಾಯಾಲಯದಿಂದ ಆದಕ್ಕೆ ಸಂಬಂಧಪಟ್ಟಂತೆ ನಿರ್ದೇಶನಗಳು ಬಂದಿವೆಯೇ ಮತ್ತು ಅವುಗಳ ಪಾಲನೆ ಆಗಿದೆಯೇ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು): ಅ) ಹೌದು.

ಆ) 1) ಈ ಬಗ್ಗೆ ಒಂದು ನೀತಿಯನ್ನು ರೂಪಿಸಲಿದ್ದು ಅಲ್ಲಿಯವರೆವಿಗೆ ಮರಗಳ ಕಡಿತಲೆಯನ್ನು ನಿಷೇದಿಸಲಾಗಿದೆ.

2) ಖಾಸಗೀ ಭೂ ಹಿಡುವಳಿ ಪ್ರದೇಶದಲ್ಲಿ ಬೆಳೆದಿರುವ ಮರಗಳನ್ನು ಹಿಡುವಳಿದಾರರು ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ 1976ರ ಪ್ರಕಾರ ಪಾಲನೆ ಮಾಡದಿದ್ದಲ್ಲಿ ಅಕ್ರಮವೆಂದು ಪರಿಗಣಿಸಲಾಗುವುದು.

ಇ) 1) ಹೌದು.

2) ಇಲ್ಲ, ಮೇಲ್ಮನವಿ ಸಲ್ಲಿಸಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರದಿಂದ ಉದ್ಭವಿಸಿರುವ ಎರಡು ಉಪ ಪ್ರಶ್ನೆಗಳನ್ನು ನಾನು ಕೇಳುತ್ತಿದ್ದೇನೆ. ಮರಗಳನ್ನು ಕಡಿಯುವುದರ ಬಗ್ಗೆ ಒಂದು ನೀತಿಯನ್ನು ನಾವು ರೂಪಿಸುತ್ತಿದ್ದೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಹಾಗಾದರೆ, ಆ ನೀತಿಯನ್ನು ಯಾವಾಗ ರೂಪಿಸುತ್ತೀರಿ? ಇದರ ಬಗ್ಗೆ ಖಚಿತವಾಗಿ ಇಷ್ಟು ತಿಂಗಳಿನಲ್ಲಿ ಮಾಡುತ್ತೇವೆಂದು ತಿಳಿಸಬೇಕು. ಎರಡನೆಯದಾಗಿ, ಇದರ ಬಗ್ಗೆ ಉಚ್ಚ ನ್ಯಾಯಾಲಯದ ನಿರ್ದೇಶನ ಬಂದಿದೆ ಎಂದು ಹೇಳಿದ್ದಾರೆ. ಆ ರೀತಿ ನಿರ್ದೇಶನ ಯಾವುದು? ಏನು ನಿರ್ದೇಶನ ಬಂದಿದೆ? ಮೂರನೆಯದಾಗಿ ಮರಗಳನ್ನು ಕಡಿಯುವುದನ್ನು ನಿಷೇಧಿಸಿದ್ದೇವೆ ಎನ್ನತಕ್ಕ ವಿಚಾರವನ್ನು ತಾವು ಹೇಳಿದ್ದೀರಿ. ಆ ರೀತಿ ತಾವು ಮರ ಕಡಿಯುವುದನ್ನು ನಿಷೇಧಿಸಿದ್ದರೂ ಸಹ ಅರಣ್ಯ ಲೂಟಿಯಾಗಿ ಸುಮಾರು ನೂರು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬೆಲೆ ಬಾಳುವ ಮರಗಳನ್ನು ಕಳ್ಳತನದಲ್ಲಿ ಸಾಗಾಣಿಕೆ ಮಾಡಿದ್ದಾರೆ. ನಾನು ಕೇವಲ ಪಶ್ಚಿಮ ಘಟ್ಟಗಳ ಬಗ್ಗೆ ಮಾತ್ರ ಹೇಳುತ್ತಿಲ್ಲ. ದಕ್ಷಿಣ ಕನ್ನಡ, ಹಾಸನ, ಚಿಕ್ಕಮಗಳೂರು, ಕಾರವಾರ, ಬೆಳಗಾವಿ ಮುಂತಾದ ಜಿಲ್ಲೆಗಳ ಅರಣ್ಯ ಪ್ರದೇಶದ ಬಗ್ಗೆ ಮಾತನಾಡುತ್ತಿಲ್ಲ. ಕೊಡಗು ಜಿಲ್ಲೆಯಲ್ಲಿ ಸುಮಾರು ನೂರು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬೆಲೆ ಬಾಳುವ ಮರಗಳನ್ನು ಕಳ್ಳತನದಲ್ಲಿ ಕಡಿದು ಸಾಗಿಸಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅದು ನನ್ನ ಮೊದಲನೆಯ ಪ್ರಶ್ನೆ.

ಶ್ರೀ ಎಂ.ಪಿ. ಕೇಶವಮೂರ್ತಿ: ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ 1976ರ ವೃಕ್ಷ ಸಂರಕ್ಷಣಾ ಕಾಯಿದೆಯ ಪ್ರಕಾರ ಹಿಡುವಳಿ ಜಮೀನಿನಲ್ಲಿ ಮರಗಳನ್ನು ಕಡಿಯಲು ಜಮೀನುದಾರರು ಕೇಳಿದ ಪಕ್ಷದಲ್ಲಿ ನಾವು ಅನುಮತಿಯನ್ನು ನಿರಾಕರಿಸಲು ಸಾಧ್ಯವಿಲ್ಲ. ಅದರ ಪ್ರಕಾರ ನಾವು ಅನುಮತಿ ಕೊಡಲೇಬೇಕಾಗುತ್ತದೆ. ಒಂದು ವೇಳೆ ಕೊಡದೇ ಇದ್ದ ಪಕ್ಷದಲ್ಲಿ ಕೂಡ ಅವರು ಮರಗಳನ್ನು ಕಡಿದಿದ್ದರೆ ಅದರಲ್ಲಿ ಕಾಂಪೌಂಡಿಂಗ್ ಆಫೆನ್ಸ್ಗೆ ಅನುಕೂಲ ಇರುವುದರಿಂದ ಆ ಪ್ರಕಾರ ನಾವು ಅವರಿಗೆ ಕಾಂಪೌಂಡಿಂಗ್ ಹಾಕುವುದು ಆಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಕೊಡಗು ಜಿಲ್ಲೆಯಲ್ಲಿ 3 ಕೋಟಿಗಿಂತಲೂ ಹೆಚ್ಚು ಮರಗಳನ್ನು ಕಡಿದು ಕಳ್ಳಸಾಗಣೆಯಾಗಿದೆ ಎಂದು ಏನು

ಆಪಾದನೆ ಮಾಡಿದ್ದಾರೋ, ಅದು ನಮ್ಮ ಇಲಾಖೆಯ ರೆಕಾರ್ಡ್ ಪ್ರಕಾರ ಇಲ್ಲ. ಸರ್ಕಾರದ ಕಾದಿಟ್ಟ ಅರಣ್ಯಗಳಲ್ಲಿ ಹಾಗೆ ಯಾವುದೇ ಮರಗಳನ್ನು ಕಡಿದಂತಹ ದೂರುಗಳು ಬಂದಿಲ್ಲ. ಖಾಸಗಿ ಜಮೀನುಗಳಲ್ಲಿ .....

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಇವರು ಕಳ್ಳರನ್ನು ಹಿಡಿದೇ ಇಲ್ಲ. ಮೂರು ಕೋಟಿ ರೂಪಾಯಿಗಳಷ್ಟು ದರೋಡೆಯಾಗಿದೆ. ದಾಖಲೆಗಳೇ ಇಲ್ಲ ಎಂದರೆ ಹೇಗೆ? ಸರ್ಕಾರಕ್ಕೆ ಕಾಗದ ಪತ್ರಗಳು ಬಂದಿಲ್ಲ, ಎಂದರೆ ಈ ತರಹ ಮೂರು ಕೋಟಿ ರೂಪಾಯಿಗಳ ದರೋಡೆಯಾಗಿದ್ದರೂ ಕಾಗದಪತ್ರಗಳು ಬಂದಿಲ್ಲವೆಂದರೆ ಏನು ಸ್ವಾಮಿ. ಮಾನ್ಯ ಕೇಶವಮೂರ್ತಿಯವರು ಸತ್ಯಕ್ಕೆ ದೂರವಾದದ್ದು ಹೇಳಿದರೆ ಹೇಗೆ? ಇದು ಏನು ಸಮಸ್ಯೆ?

ಅಧ್ಯಕ್ಷರು : ಅವರು ಹೇಳುವುದನ್ನು ಕೇಳಿ.

ಶ್ರೀ ಎಂ.ಪಿ. ಕೇಶವಮೂರ್ತಿ : ನೀವು ಮಧ್ಯೆದಲ್ಲಿ ಕೇಳಿದರೆ ಕಷ್ಟವಾಗುತ್ತದೆ. ಮಾನ್ಯ ಸಿಂಧ್ಯಾರವರು ಏನು ಹೇಳಿದ್ದಾರೆ. ಕೊಡಗು ಜಿಲ್ಲೆಯಲ್ಲಿ 3 ಕೋಟಿ ರೂಪಾಯಿಗಳ ಮರಗಳು ಕಳ್ಳ ಸಾಗಾಣಿಕೆಯಾಗಿರುವಂಥಾದ್ದು ಈ ಪ್ರಶ್ನೆಯಲ್ಲಿದೆ. ನಮ್ಮ ಪ್ರಕಾರ ಆ ರೀತಿಯಾಗಿಲ್ಲ ಎಂದು ಹೇಳುತ್ತಿದ್ದೇನೆ. ಆ ರೀತಿ ದೂರು ಬಂದಿತ್ತು, ಹೋಗಿ ತನಿಖೆ ಮಾಡಿದಾಗ ಅಲ್ಲಿ ಏನೂ ನಡೆದಿಲ್ಲ ಎಂದು ತಿಳಿಯಿತು. ಆದರೆ ಖಾಸಗಿ ಜಮೀನುಗಳಲ್ಲಿ ಇತ್ತೀಚೆಗೆ ಈ ರೀತಿ ಆಗುತ್ತಿರುವುದರಿಂದ 1976ರ ಮರ ಸಂರಕ್ಷಣಾ ಕಾಯಿದೆ ಪ್ರಕಾರ ಕೆಲವಾರು ಸವಲತ್ತುಗಳು ಇರುವುದರಿಂದ ಅಲ್ಲಿ ಅನುಮತಿ ಕೊಟ್ಟರೂ ಕೊಡದಿದ್ದರೂ ಆ ರೀತಿ ಮಾಡಿದ್ದಾರೆಂದು, ಅವರ ಮೇಲೆ ಕೇಸ್ ಮಾಡಿ ತನಿಖೆ ಆಗಿರುತ್ತದೆ. ಆ ರೀತಿ ಪರವಾನಗಿ ಕೇಳಿ ನಾವು ಅದನ್ನು ನಿರಾಕರಣೆ ಮಾಡಿರತಕ್ಕದ್ದು ನಿಜ. ಕೆಲವರು ಉಚ್ಚನ್ಯಾಯಾಲಯದಲ್ಲಿ ಇದನ್ನು ಚಾಲೆಂಜ್ ಮಾಡಿ ನಮ್ಮ ಆದೇಶವನ್ನು ಅನೂರ್ಜಿತಗೊಳಿಸಿದ್ದಾರೆ.

ಈ ಬಗ್ಗೆ ಎರಡು ಉದಾಹರಣೆಗಳನ್ನು ಹೇಳುವುದಾದರೆ ಶ್ರೀಮತಿ ಜೇಕಬ್ ಎನ್ನುವವರು ತಮ್ಮ ಸ್ವಂತ ಜಮೀನಿನಲ್ಲಿ ಅಂದರೆ 135 ಎಕರೆ ಜಮೀನಿನಲ್ಲಿ 25 ಸಾವಿರ ಮರಗಳನ್ನು ಕಡಿದು ರಬ್ಬರ್ ಪ್ಲಾಂಟೇಷನ್ ಮಾಡಬೇಕೆಂದು ಕೇಳಿದಾಗ ನಾವು ಅಷ್ಟು ಮರಗಳನ್ನು ಕಡಿಯಲು ಸಾಧ್ಯವಿಲ್ಲವೆಂದು ಹೇಳಿದಾಗ ಅವರು ಅದನ್ನು ಉಚ್ಚ ನ್ಯಾಯಾಲಯದಲ್ಲಿ ಛಾಲೆಂಜ್ ಮಾಡಿದಂತಹ ಸಂದರ್ಭದಲ್ಲಿ ನ್ಯಾಯಾಧೀಶರು ಕೂಡ ಅದನ್ನು ತಳ್ಳಿ ಹಾಕಿ ವೃಕ್ಷ ಸಂರಕ್ಷಣೆಯ ಕಾಯಿದೆಯ ಪ್ರಕಾರ ಅವರು ರಬ್ಬರ್ ಪ್ಲಾಂಟೇಷನ್ ಬೆಳೆಯಲು ಅವಕಾಶವಿದೆ, ನೀವು ಅವರಿಗೆ ಅನುಮತಿ ಕೊಡಬಹುದು ಎಂದು ಆದೇಶ ಕೊಟ್ಟರು. ಅದಾದಮೇಲೆ ನಾವು ಅಪೀಲು ಹಾಕಿದ್ದೇವೆ. ಅದೇ ಪ್ರಕಾರ ಮತ್ತೊಬ್ಬರು ಕೂಡ 21-1ನೇ ಕಲಂನ 1976ನೇ ವೃಕ್ಷ ಸಂರಕ್ಷಣೆ ಕಾಯಿದೆಯ ಪ್ರಕಾರ ಅವರಿಗೆ ಕಾಂಪೌಂಡಿಂಗ್ ಫೈನ್ ಹಾಕಬೇಕೆಂದು ಹೇಳಿದಾಗ ಅದನ್ನೂ ಕೂಡ ಚಾಲೆಂಜ್ ಮಾಡಿ ಅನೂರ್ಜಿತಗೊಳಿಸಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ನಮಗೆ ಅಲ್ಲಿನ ಪರಿಸರ ಪ್ರೇಮಿಗಳು ಮತ್ತು ಸಾರ್ವಜನಿಕರು ದೂರು ಬರೆದ ಪ್ರಯುಕ್ತ ಕಳೆದ 30-11-93ರಂದು ಮಾನ್ಯ ಮುಖ್ಯಮಂತ್ರಿಗಳು ಸರ್ಕಾರ ಮರಗಳನ್ನು ಕಡಿಯುವುದರ ಬಗ್ಗೆ ನಿಲುವನ್ನು ತೆಗೆದುಕೊಳ್ಳುವವರೆಗೆ ಯಾವುದೇ ರೀತಿಯ ಮರಗಳನ್ನು ಕಡಿಯಬಾರದು ಎಂದು ಸುತ್ತೋಲೆಯನ್ನು ಕಳುಹಿಸಿದ್ದಾರೆ. ಅದರ ಪ್ರಕಾರ ....

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮಂತ್ರಿಗಳು ಮರಗಳ ಕಳ್ಳತನವಾಗಿರುವಂಥಾದ್ದು ಸರ್ಕಾರದ ಗಮನಕ್ಕೆ, ಅರಣ್ಯ ಇಲಾಖೆಯವರ ಗಮನಕ್ಕೆ ಬಂದಿಲ್ಲ, ದಾಖಲೆಯಲ್ಲಿಲ್ಲ

ಆಪಾದನೆ ಮಾಡಿದ್ದಾರೋ, ಅದು ನಮ್ಮ ಇಲಾಖೆಯ ರೆಕಾರ್ಡ್ ಪ್ರಕಾರ ಇಲ್ಲ. ಸರ್ಕಾರದ ಕಾದಿಟ್ಟ ಅರಣ್ಯಗಳಲ್ಲಿ ಹಾಗೆ ಯಾವುದೇ ಮರಗಳನ್ನು ಕಡಿದಂತಹ ದೂರುಗಳು ಬಂದಿಲ್ಲ. ಖಾಸಗಿ ಜಮೀನುಗಳಲ್ಲಿ .....

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಇವರು ಕಳ್ಳರನ್ನು ಹಿಡಿದೇ ಇಲ್ಲ. ಮೂರು ಕೋಟಿ ರೂಪಾಯಿಗಳಷ್ಟು ದರೋಡೆಯಾಗಿದೆ. ದಾಖಲೆಗಳೇ ಇಲ್ಲ ಎಂದರೆ ಹೇಗೆ? ಸರ್ಕಾರಕ್ಕೆ ಕಾಗದ ಪತ್ರಗಳು ಬಂದಿಲ್ಲ, ಎಂದರೆ ಈ ತರಹ ಮೂರು ಕೋಟಿ ರೂಪಾಯಿಗಳ ದರೋಡೆಯಾಗಿದ್ದರೂ ಕಾಗದಪತ್ರಗಳು ಬಂದಿಲ್ಲವೆಂದರೆ ಏನು ಸ್ವಾಮಿ. ಮಾನ್ಯ ಕೇಶವಮೂರ್ತಿಯವರು ಸತ್ಯಕ್ಕೆ ದೂರವಾದದ್ದು ಹೇಳಿದರೆ ಹೇಗೆ? ಇದು ಏನು ಸಮಸ್ಯೆ?

ಅಧ್ಯಕ್ಷರು : ಅವರು ಹೇಳುವುದನ್ನು ಕೇಳಿ.

ಶ್ರೀ ಎಂ.ಪಿ. ಕೇಶವಮೂರ್ತಿ : ನೀವು ಮಧ್ಯೆದಲ್ಲಿ ಕೇಳಿದರೆ ಕಷ್ಟವಾಗುತ್ತದೆ. ಮಾನ್ಯ ಸಿಂಧ್ಯಾರವರು ಏನು ಹೇಳಿದ್ದಾರೆ. ಕೊಡಗು ಜಿಲ್ಲೆಯಲ್ಲಿ 3 ಕೋಟಿ ರೂಪಾಯಿಗಳ ಮರಗಳು ಕಳ್ಳ ಸಾಗಾಣಿಕೆಯಾಗಿರುವಂಥಾದ್ದು ಈ ಪ್ರಶ್ನೆಯಲ್ಲಿದೆ. ನಮ್ಮ ಪ್ರಕಾರ ಆ ರೀತಿಯಾಗಿಲ್ಲ ಎಂದು ಹೇಳುತ್ತಿದ್ದೇನೆ. ಆ ರೀತಿ ದೂರು ಬಂದಿತ್ತು, ಹೋಗಿ ತನಿಖೆ ಮಾಡಿದಾಗ ಅಲ್ಲಿ ಏನೂ ನಡೆದಿಲ್ಲ ಎಂದು ತಿಳಿಯಿತು. ಆದರೆ ಖಾಸಗಿ ಜಮೀನುಗಳಲ್ಲಿ ಇತ್ತೀಚೆಗೆ ಈ ರೀತಿ ಆಗುತ್ತಿರುವುದರಿಂದ 1976ರ ಮರ ಸಂರಕ್ಷಣಾ ಕಾಯಿದೆ ಪ್ರಕಾರ ಕೆಲವಾರು ಸವಲತ್ತುಗಳು ಇರುವುದರಿಂದ ಅಲ್ಲಿ ಅನುಮತಿ ಕೊಟ್ಟರೂ ಕೊಡದಿದ್ದರೂ ಆ ರೀತಿ ಮಾಡಿದ್ದಾರೆಂದು, ಅವರ ಮೇಲೆ ಕೇಸ್ ಮಾಡಿ ತನಿಖೆ ಆಗಿರುತ್ತದೆ. ಆ ರೀತಿ ಪರವಾನಗಿ ಕೇಳಿ ನಾವು ಅದನ್ನು ನಿರಾಕರಣೆ ಮಾಡಿರತಕ್ಕದ್ದು ನಿಜ. ಕೆಲವರು ಉಚ್ಚನ್ಯಾಯಾಲಯದಲ್ಲಿ ಇದನ್ನು ಚಾಲೆಂಜ್ ಮಾಡಿ ನಮ್ಮ ಆದೇಶವನ್ನು ಅನೂರ್ಜಿತಗೊಳಿಸಿದ್ದಾರೆ.

ಈ ಬಗ್ಗೆ ಎರಡು ಉದಾಹರಣೆಗಳನ್ನು ಹೇಳುವುದಾದರೆ ಶ್ರೀಮತಿ ಜೇಕಬ್ ಎನ್ನುವವರು ತಮ್ಮ ಸ್ವಂತ ಜಮೀನಿನಲ್ಲಿ ಅಂದರೆ 135 ಎಕರೆ ಜಮೀನಿನಲ್ಲಿ 25 ಸಾವಿರ ಮರಗಳನ್ನು ಕಡಿದು ರಬ್ಬರ್ ಪ್ಲಾಂಟೇಷನ್ ಮಾಡಬೇಕೆಂದು ಕೇಳಿದಾಗ ನಾವು ಅಷ್ಟು ಮರಗಳನ್ನು ಕಡಿಯಲು ಸಾಧ್ಯವಿಲ್ಲವೆಂದು ಹೇಳಿದಾಗ ಅವರು ಅದನ್ನು ಉಚ್ಚ ನ್ಯಾಯಾಲಯದಲ್ಲಿ ಛಾಲೆಂಜ್ ಮಾಡಿದಂತಹ ಸಂದರ್ಭದಲ್ಲಿ ನ್ಯಾಯಾಧೀಶರು ಕೂಡ ಅದನ್ನು ತಳ್ಳಿ ಹಾಕಿ ವೃಕ್ಷ ಸಂರಕ್ಷಣೆಯ ಕಾಯಿದೆಯ ಪ್ರಕಾರ ಅವರು ರಬ್ಬರ್ ಪ್ಲಾಂಟೇಷನ್ ಬೆಳೆಯಲು ಅವಕಾಶವಿದೆ, ನೀವು ಅವರಿಗೆ ಅನುಮತಿ ಕೊಡಬಹುದು ಎಂದು ಆದೇಶ ಕೊಟ್ಟರು. ಅದಾದಮೇಲೆ ನಾವು ಅಪೀಲು ಹಾಕಿದ್ದೇವೆ. ಅದೇ ಪ್ರಕಾರ ಮತ್ತೊಬ್ಬರು ಕೂಡ 21-1ನೇ ಕಲಂನ 1976ನೇ ವೃಕ್ಷ ಸಂರಕ್ಷಣೆ ಕಾಯಿದೆಯ ಪ್ರಕಾರ ಅವರಿಗೆ ಕಾಂಪೌಂಡಿಂಗ್ ಫೈನ್ ಹಾಕಬೇಕೆಂದು ಹೇಳಿದಾಗ ಅದನ್ನೂ ಕೂಡ ಚಾಲೆಂಜ್ ಮಾಡಿ ಅನೂರ್ಜಿತಗೊಳಿಸಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ನಮಗೆ ಅಲ್ಲಿನ ಪರಿಸರ ಪ್ರೇಮಿಗಳು ಮತ್ತು ಸಾರ್ವಜನಿಕರು ದೂರು ಬರೆದ ಪ್ರಯುಕ್ತ ಕಳೆದ 30-11-93ರಂದು ಮಾನ್ಯ ಮುಖ್ಯಮಂತ್ರಿಗಳು ಸರ್ಕಾರ ಮರಗಳನ್ನು ಕಡಿಯುವುದರ ಬಗ್ಗೆ ನಿಲುವನ್ನು ತೆಗೆದುಕೊಳ್ಳುವವರೆಗೆ ಯಾವುದೇ ರೀತಿಯ ಮರಗಳನ್ನು ಕಡಿಯಬಾರದು ಎಂದು ಸುತ್ತೋಲೆಯನ್ನು ಕಳುಹಿಸಿದ್ದಾರೆ. ಅದರ ಪ್ರಕಾರ ....

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮಂತ್ರಿಗಳು ಮರಗಳ ಕಳ್ಳತನವಾಗಿರುವಂಥಾದ್ದು ಸರ್ಕಾರದ ಗಮನಕ್ಕೆ, ಅರಣ್ಯ ಇಲಾಖೆಯವರ ಗಮನಕ್ಕೆ ಬಂದಿಲ್ಲ, ದಾಖಲೆಯಲ್ಲಿಲ್ಲ

ಮಾಡಿಸಿ ಅವರಿಂದ ಆ ವರದಿ ತರಿಸಿಕೊಂಡು ನೀವು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ ಪ್ರಯುಕ್ತ ನಮ್ಮ ಇಲಾಖೆಯಲ್ಲಿ ಒಬ್ಬ ಉನ್ನತ ಅಧಿಕಾರಿ ಮತ್ತು ಹಿರಿಯ ಅಧಿಕಾರಿಯಾಗಿರತಕ್ಕಂತಹ ಶ್ರೀ ಯಲ್ಲಪ್ಪ ರೆಡ್ಡಿಯವರನ್ನು ಈಗಾಗಲೇ ನಾವು ಅಲ್ಲಿಗೆ ಎನ್ಷಯರಿ ಆಫೀಸರ್ ಆಗಿ ನೇಮಕ ಮಾಡಿದ್ದೇವೆ. ಅವರು ಈಗಾಗಲೇ ಅಲ್ಲಿ ಕಾರ್ಯಾಚರಣೆಯಲ್ಲಿ ಇದ್ದಾರೆ.

ಆ ವರದಿ ಬಂದಕೂಡಲೇ ಈ ಮರ ಕಡಿಯುವ ನೀತಿಯ ಬಗ್ಗೆ ಈ ಕಾಯಿದೆ ಸಂರಕ್ಷಣೆ, ವೃಕ್ಷಗಳ ಸಂರಕ್ಷಣೆ ಕಾಯಿದೆ 76 ಏನು ಎದೆ ಅದಕ್ಕೂ ಕೂಡ ಏನಾದರೂ ಕೆಲವು ತಿದ್ದುಪಡಿ ಮಾಡಬೇಕಾಗಿದ್ದರೆ ಆ ಒಂದು ಸಲಹೆಯನ್ನು ತಾವು ಕೊಡಬೇಕು ಎಂದು ಈಗಾಗಲೇ ನಾವು ಅವರಿಗೆ ತಿಳಿಸಿದ್ದೇವೆ. ಬಹುಶಃ ಆ ವರದಿ ಬಂದಕೂಡಲೇ ನಾವು ಇದರ ಬಗ್ಗೆ ಹೇಳುತ್ತೇವೆ ಮತ್ತು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಯಾವುದೇ ಕಾರಣದಿಂದಲೂ ಒಂದು ನೀತಿಯನ್ನು ನಾವು ರೂಪಿಸುವಲ್ಲಿ ಆ ಕೊಡಗು ಜಿಲ್ಲೆಯಲ್ಲಿ ಮರಗಳನ್ನು ಕಡಿಯಬಾರದು ಎಂದು ಒಂದು ಸುತ್ತೋಲೆ ಕಳುಹಿಸಿದ ಪ್ರಯುಕ್ತ ಮತ್ತು ಅದರ ಬಗ್ಗೆ ಆ ಜಿಲ್ಲೆಯ ಮತ್ತು ಉತ್ತರ ಕನ್ನಡ ಜಿಲ್ಲೆಯ ಶಾಸಕರನ್ನು ಕರೆದು ಯಾವ ಬಗ್ಗೆ ಇದನ್ನು ಮಾಡಿದರೆ ಅನುಕೂಲವಾಗುತ್ತದೆ ಎನ್ನತಕ್ಕಂಥಾದ್ದರ ಬಗ್ಗೆ ಕೇಳಲು ಈ ಸದನ ಮುಗಿಯುವುದರೊಳಗೆ ನಾನು ಒಂದು ಸಭೆ ಕರೆಯುತ್ತೇನೆ ಎಂದು ಕೂಡ ಹೇಳಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಆ ಸಿಓಡಿ ಎನ್ಷಯರಿ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಎಂ.ಪಿ. ಕೇಶವಮೂರ್ತಿ: ಈಗಾಗಲೇ ಒಬ್ಬರು ಆಫೀಸರನ್ನು ಇದೇ ವಿಷಯಕ್ಕೆ ಗೊತ್ತು ಮಾಡಿರುವುದರಿಂದ ಮತ್ತೆ ಅದರ ಬಗ್ಗೆ ವರದಿ .....

ಶ್ರೀ ಪಿ.ಜಿ.ಆರ್. ಸಿಂಧ್ಯ: ಫಾರೆಸ್ಟ್ ಡಿಪಾರ್ಟ್ಮೆಂಟಿನ ನಿಮ್ಮ ಅಧಿಕಾರಿ ಯಲ್ಲಪ್ಪ ರೆಡ್ಡಿಯವರು ಒಳ್ಳೆಯ ಅಧಿಕಾರಿ. ಅವರು ಹೋದರೆ ನಿಮ್ಮ ಫಾರೆಸ್ಟ್ ಡಿಪಾರ್ಟ್ಮೆಂಟ್ಗೆ ಪೋಲೀಸ್ ಡಿಪಾರ್ಟ್ಮೆಂಟಿನವರು ಸಾಕಷ್ಟು ಕೋ-ಆಪರೇಟ್ ಮಾಡುವುದಿಲ್ಲ. ಅಲ್ಲಿರುವಂತಹ ನೊಬೆನ್ ಎನ್ನುವವನಿಗೆ ಪಿಸ್ತೂಲ್ ತೆಗೆದುಕೊಂಡು ಹೋದಾಗ ಬೇರೆಯವರೆಲ್ಲಾ ಓಡಿಹೋಗಿದ್ದಾರೆ. ಅವನು 3 ತಿಂಗಳಿನಿಂದ ತಪ್ಪಿಸಿಕೊಂಡಿದ್ದಾನೆ, ಅವನನ್ನು ನಿಮ್ಮ ಸರ್ಕಾರದವರು ಅರೆಸ್ಟ್ ಮಾಡಿಲ್ಲ. ಒಂದು ಸಿಓಡಿ ಎನ್ಷಯರಿಗೆ ಆರ್ಡರ್ ಮಾಡಿ ಎಂದು ಹೇಳಿದರೆ ನಿಮ್ಮ ಕೈಯಲ್ಲಿ ಅದೂ ಆಗುವುದಿಲ್ಲ.

ಶ್ರೀ ಎಂ.ಪಿ. ಕೇಶವಮೂರ್ತಿ: ಮರ ಕದ್ದು ಹೋಗುತ್ತಿದೆ ಎನ್ನುವುದರ ಬಗ್ಗೆ ರಿಪೋರ್ಟ್ ಬಂದು ಆದನಂತರ ಬೇಕಾದರೆ ಸಿಓಡಿ ಎನ್ಷಯರಿ ಇದಕ್ಕೆ ಬೇಕೇ ಎಂದು ವಿಚಾರ ಮಾಡಿ ಮಾಡಬೇಕಾಗಿದೆ. ಈಗಾಗಲೇ ಇದರ ಬಗ್ಗೆ ಒಬ್ಬ ಅಧಿಕಾರಿಯನ್ನು ತನಿಖೆ ಮಾಡುವುದಕ್ಕೆ ಹಾಕಿರುವುದರಿಂದ ಮತ್ತೆ ಇನ್ನೊಂದು ಸಿಓಡಿ ತನಿಖೆಗೆ ಹಾಕುವುದು ಅಷ್ಟು ಸೂಕ್ತ ಅಲ್ಲ ಎಂದು ಕಾಣುತ್ತದೆ. ಆ ವರದಿ ಬಂದನಂತರ ನಾನು ಈ ಬಗ್ಗೆ ಆಲೋಚನೆ ಮಾಡುತ್ತೇನೆ ಎಂದು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರು ಕೊಡಗಿಗೆ ಸೀಮಿತವಾಗಿ ಪ್ರಶ್ನೆ ಕೇಳುತ್ತಿದ್ದರೆ ತಾವು ಉತ್ತರ ಕೊಡುತ್ತಿದ್ದೀರಿ. ಅದೇ ತಾವು ಹೇಳಬೇಕಾದರೆ ಎಲ್ಲೂ ಈ ರೀತಿ ನಮಗೆ ವರದಿಯಾಗಿಲ್ಲ, ದಾಖಲೆಗಳಿಲ್ಲ ಎನ್ನುವಂತಹ ಮಾತನ್ನು ಹೇಳಿದ್ದೀರಿ. ತಾವು ಎಲ್ಲಿಗೆ ಬೇಕಾದರೂ ಬನ್ನಿ, ಚಿಕ್ಕಮಗಳೂರು ಜಿಲ್ಲೆಗೆ ಬನ್ನಿ, ಶಿವಮೊಗ್ಗಕ್ಕೆ ಬನ್ನಿ, ಉತ್ತರ ಕನ್ನಡಕ್ಕೆ ಬನ್ನಿ, ಕೊಡಗಿಗೆ ಬನ್ನಿ, ಎಲ್ಲಾ ಕಡೆ ನಿರಂತರವಾಗಿ ಈ ಕಳ್ಳಸಾಗಾಣಿಕೆ ನಡೆದಿದೆ. ಹೀಗೆ ರಾಜ್ಯದಲ್ಲಿ ಕಳ್ಳಸಾಗಾಣಿಕೆ ನಡೆಯುವುದನ್ನು ತಪ್ಪಿಸುವುದಕ್ಕೆ ಕಾಡು ಕಳ್ಳತನವನ್ನು ನಿಲ್ಲಿಸುವುದಕ್ಕೆ ಸರಿಯಾದಂತಹ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೀರಾ ಎಂದು ದಯಮಾಡಿ ಹೇಳಿ. ನೀವು ಯಾವುದೇ ಫಾರೆಸ್ಟ್ ಇಲಾಖೆಗೆ ಹೋಗಿ ನೋಡಿ, ಸಾವಿರಾರು

ಲಾರಿಗಳು ಇವೆ ಮತ್ತು ಗಾಡಿಗಳು ನಿಂತಿದ್ದಾವೆ, ಕೆಲವನ್ನು ಸೀಜ್ ಮಾಡಿದ್ದಾರೆ. ಕೆಲವು ಹಾಗೆಯೇ ಹೋಗುತ್ತಿವೆ, ಇದೇ ಅದಕ್ಕೆ ಆಧಾರ. ಅದಕ್ಕೆ ದಯಮಾಡಿ ಉತ್ತರ ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ: ಈಗ ಏನು ಮಾನ್ಯ ಯಡಿಯೂರಪ್ಪನವರು, ಮಾನ್ಯ ಸಿಂಧ್ಯಾರವರು ಈಗ ಹೇಳಿದ್ದಾರೆ, ಆ ಬಗ್ಗೆ ಯಲ್ಲಪ್ಪ ರೆಡ್ಡಿಯವರನ್ನು ಎನ್ಷಯರಿಗೆ ಕಳುಹಿಸಿರುವುದಾಗಿ ಹೇಳಿದ್ದೀರಿ. ಬಹಳ ಸಂತೋಷ. ನನಗೂ ಗೊತ್ತು, ಅವರ ಬಗ್ಗೆ ನಮಗೆ ಸಾಕಷ್ಟು ಗೌರವ ಇದೆ. ಆದರೆ ತಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ, ಬಹಳ ಸಂತೋಷ. ಯಲ್ಲಪ್ಪ ರೆಡ್ಡಿಯವರು ಕೊಟ್ಟ ವರದಿಯನ್ನು ಈ ಸದನದ ಮುಂದೆ ಇಡುವುದಕ್ಕೆ ತಾವು ಸಿದ್ಧರಿದ್ದೀರಾ? ಅದು ಬಹಳ ಮಹತ್ವ ಇದೆ. ಏಕೆಂದರೆ ಅಲ್ಲಿ ಬಹಳಷ್ಟು ಅಧಿಕಾರಿಗಳು ಸಿಕ್ಕಿದ್ದಾರೆ. ತಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದಿರಿ ಆದರೆ ಆ ವರದಿ ಏನು ಎಂದು ನಮಗೆ ಗೊತ್ತಾಗಬೇಕಾಗುತ್ತದೆ. ಆದ್ದರಿಂದ ಈ ಸದನದ ಮುಂದೆ ಆ ವರದಿಯನ್ನು ಇಡುವುದಕ್ಕೆ ಸಿದ್ಧ ಇದ್ದೀರೋ ಏನು ಎಂದತು ಕೇಳುತ್ತಿದ್ದೇನೆ.

ಶ್ರೀ ಎಂ.ಪಿ. ಕೇಶವಮೂರ್ತಿ: ಆ ವರದಿ ಬಂದಕೂಡಲೇ ಈ ಸದನದ ಮುಂದೆ ಇಟ್ಟು .....

ಶ್ರೀ ಮಾಟಾಳ್ ನಾಗರಾಜ್: ಎಷ್ಟು ದಿವಸದಲ್ಲಿ ವರದಿ ಕೊಡಬೇಕು ಎಂದು ಹೇಳಿದ್ದೀರಿ?

ಶ್ರೀ ಎಮ್.ಪಿ. ಕೇಶವಮೂರ್ತಿ: 31ಮಾರ್ಚ್ 94ರೊಳಗೆ ವರದಿ ಕೊಡಬೇಕೆಂದು ಲಿಖಿತ ಮೂಲಕ ತಿಳಿಸಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಎಲ್ಲಾ ಕಡೆ ಕಳ್ಳಸಾಗಾಣಿಕೆ ನಡೆಯುತ್ತಿದೆ. ನಾವು ಇಲ್ಲಿ ಜವಾಬ್ದಾರಿಯಿಂದ ಮಾತನಾಡುತ್ತಿದ್ದೇವೆ. ಸರ್ಕಾರ ಸೂಕ್ತ ಉತ್ತರ ಕೊಡದಿದ್ದರೆ ಹೇಗೆ? ಅದನ್ನು ನಿಲ್ಲಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ?

(ಉತ್ತರ ಇಲ್ಲ)

ಸೇಡಂ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆ

176 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಕೆಲವು ಶಿಕ್ಷಕರು ತಿಂಗಳಿಗೊಮ್ಮೆ ಕೇವಲ ಸಂಬಳ ತೆಗೆದುಕೊಳ್ಳಲು ಮಾತ್ರ ಬರುತ್ತಿದ್ದು ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಗಳು ಹಾಗೂ ದೂರುಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಅವರನ್ನು ವರ್ಗಾವಣೆ ಮಾಡಲು ಮಾನ್ಯ ಮುಖ್ಯ ಮಂತ್ರಿಯವರು ಹಾಗೂ ಪ್ರಾಥಮಿಕ ಶಿಕ್ಷಣ ನಿರ್ದೇಶಕರು ಆದೇಶ ನೀಡಿದ್ದರೂ ಸಹ ಜಿಲ್ಲಾ ಮಟ್ಟದ ಅಧಿಕಾರಿಗಳು ಆ ಆದೇಶಗಳನ್ನು ಕಡೆಗಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಆದರಿಂದ ಸಂಬಂಧಪಟ್ಟ ಅಧಿಕಾರಿಗಳು ಆ ಶಾಲೆಗಳಲ್ಲಿನ ವಿದ್ಯಾರ್ಥಿಗಳ ವಿದ್ಯಾಭ್ಯಾಸ ನಡೆಸುವ ಮನೋಭಾವ ಇಲ್ಲದಂತಾಗಿಲ್ಲವೇ?*

ಈ) *ಸರ್ಕಾರದ ಆದೇಶಗಳನ್ನು ಕಡೆಗಣಿಸುತ್ತಿರುವ ಅಂತಹ ಅಧಿಕಾರಿಗಳ ಮೇಲೆ ಕೈಗೊಂಡಿರುವ ಕ್ರಮವೇನು?*